**<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಸ್ಪೆಷಲ್ ಸಿ. ನಂ.41/2023</u>**

ದಿನಾಂಕ 08.01.2026
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 16 ಪ್ರಾಸಾ - 9

| | | |
|---|---|---|
| ಹೆಸರು | ಃ | ಬಸವರಾಜು |
| ತಂದೆಯ ಹೆಸರು | ಃ | ಲೇಟ್ ಚಂದ್ರಪ್ಪ |
| ವಯಸ್ಸು | ಃ | 39 ವರ್ಷ |
| ಉದ್ಯೋಗ | ಃ | ಸಬ್ ಇನ್ಸ್ ಪೆಕ್ಟರ್, ಚನ್ನಪಟ್ಟಣ ಸಂಚಾರ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಚನ್ನಪಟ್ಟಣ |

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

ಏಪ್ರೀಲ್ 2022 ರಿಂದ ಏಪ್ರೀಲ್ 2025 ರವರೆಗೆ ನಾನು ಅಕ್ಕೂರು ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 03.10.2022 ರಂದು ಮಧ್ಯಾಹ್ನ 12.05 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಪಿರ್ಯಾದುದಾರರಾದ ಶಿವ ಬಿಕೆ ರವರು ಠಾಣೆಗೆ ಹಾಜರಾಗಿ ನೀಡಿದಂತಹ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಮೊಕದ್ದಮೆ ಸಂಖ್ಯೆ 221/2022 ನ್ನು ದಾಖಲಿಸಿಕೊಂಡೆ. ಪಿರ್ಯಾದಿಯನ್ನು ಸ್ವೀಕರಿಸಿದ ಸಲುವಾಗಿ ಸಹಿ ಮಾಡಿದ್ದು ಪಿರ್ಯಾದಿ ನಿ.ಪಿ.8 ಇದ್ದು, ಸಾಕ್ಷಿ ಗುರುತಿಸಿರುವ ತನ್ನ ಸಹಿಯನ್ನು ನಿ.ಪಿ.8(ಬಿ) ಎಂದು ಗುರುತಿಸಲಾಯಿತು. ಸದರಿ ದೂರಿಗೆ ಸಂಬಂಧಿಸಿದ ಪ್ರ.ವ.ಮಾ.ಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಅದಕ್ಕೆ ಸಂಬಂಧಿಸಿದ ಪ್ರ.ವ.ಮಾಹಿತಿಯನ್ನು ಈಗ ನೋಡುತ್ತಿದ್ದು ನಿ.ಪಿ.16 ಹಾಗೂ ಸಾಕ್ಷಿಯ ಸಹಿಯನ್ನು 16(ಎ) ಎಂದು ಗುರುತಿಸಲಾಯಿತು.

3. ಸದರಿ ಪ್ರಕರಣವು ಘೋರ ಅಪರಾಧವಾಗಿರುವ ಕಾರಣ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 17 ರವರಿಗೆ ವಹಿಸಿರುತ್ತೇನೆ.

4. ದಿನಾಂಕ 21.09.2022 ರಂದು ಶಿವ ಮತ್ತು ಮಹಾಲಿಂಗ ರವರು ಅಮ್ಮಳ್ಳಿದೊಡ್ಡಿ ಗ್ರಾಮದಲ್ಲಿ ಜಮೀನಿನಲ್ಲಿ ಮರದ ದಿಮ್ಮಿಗಳನ್ನು ಕಡಿಯುವ ವಿಚಾರವಾಗಿ ಜಗಳ ಮಾಡಿಕೊಂಡಿದ್ದು, ಅದಕ್ಕೆ ಸಂಬಂಧಿಸಿದಂತೆ ಶಿವ ಎನ್ನುವವರು ತುರ್ತು ಸಂಖ್ಯೆ 112 ಗೆ ಕರೆ ಮಾಡಿ ತಮಗೆ ರಕ್ಷಣೆ ಬೇಕು ಎಂದು ಕೋರಿಕೊಂಡಿದ್ದು, ಅದರನ್ವಯ ನಮ್ಮ 112 ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ ಉಭಯ ಪಕ್ಷಕಾರರನ್ನು ಸಮಾಧಾನ ಪಡಿಸಿ ಅಲ್ಲಿ ಇದ್ದಂತಹ ಮರದ ದಿಮ್ಮಿ ತುಂಬಿದಂತಹ ಟ್ರ್ಯಾಕ್ಟರ್ ಮತ್ತು ಟ್ರೈಲ್ ನ್ನು ಠಾಣೆ ತಂದು ಹಾಜರುಪಡಿಸಿದ್ದು, ಆ ವಿಚಾರಕ್ಕೆ ಸಂಬಂಧಿಸಿದಂತೆ ಎರಡು ಪಕ್ಷಕಾರರು ಸೇರಿ ಗ್ರಾಮದಲ್ಲಿ ಪಂಚಾಯಿತಿಕೆ ಮಾಡಿಕೊಳ್ಳುತ್ತೇವೆ ಎಂದು ಹೇಳಿ ಅಲ್ಲಿವರೆಗೆ ಇದು ತಮ್ಮ ಠಾಣೆಯಲ್ಲಿಯೇ ಇರಲಿ ಎಂದು ಹೇಳಿ ಹೋಗಿರುತ್ತಾರೆ.

5. ನಂತರ ತಮ್ಮ ತಕರಾರು ಬಗೆಹರಿದಿಲ್ಲ ಎಂಬ ಕಾರಣದಿಂದ ದಿನಾಂಕ 03.10.2022 ರಂದು ಪಿರ್ಯಾದುದಾರ ಶಿವ ಠಾಣೆಗೆ ಹಾಜರಾಗಿ ಈ ಪ್ರಸ್ತುತ ದೂರು ನೀಡಿರುತ್ತಾರೆ. ಆ ಕಾರಣ ಠಾಣೆಯಲ್ಲಿ ಇರಿಸಿದಂತಹ ಮರದ ದಿಮ್ಮಿ ತುಂಬಿದ ಟ್ರ್ಯಾಕ್ಟರ್ ಮತ್ತು ಟ್ರೈಲರ್ ನ್ನು ಮುಂದಿನ ಕ್ರಮಕ್ಕಾಗಿ ತನಿಖಾಧಿಕಾರಿಯ ಸಮಕ್ಷಮ ಹಾಜರುಪಡಿಸಿ ವರದಿ ನೀಡಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 17 ಮತ್ತು ಸಾಕ್ಷಿಯ ಸಹಿಯನ್ನು ನಿಶಾನೆ ಪಿ 17(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ.ಕೆಸಿಎಂ., ವಕೀಲರ ಪರವಾಗಿ ಶ್ರೀಮತಿ.ಎಲ್.ಬಿ. ವಕೀಲರು ಸಮಯಾವಕಾಶ ಕೋರಿದ್ದು, ಸಾಕ್ಷಿಯು ತನಿಖಾಧಿಕಾರಿಯಾಗಿರುವ ಕಾರಣ, ಪಾಟೀಸವಾಲಿಗಾಗಿ ಪ್ರಕರಣವನ್ನು ಮುಂದೂಡಲು ವಕೀಲರು ಕೇಳಿರುವ ಕಾರಣಗಳು ಸಮಂಜಸವಲ್ಲದೇ ಇರುವ ಕಾರಣ ಕೋರಿಕೆಯನ್ನು ತಳ್ಳಿಹಾಕಿ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>**

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ.)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**